# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 991 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 24.07.2024 |
| ಉತ್ತರಿಸುವ ಸಚಿವರು | : ಮಾನ್ಯ ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಕಂದಾಯ ಗ್ರಾಮಗಳ, ಕಂದಾಯ ವೃತ್ತಗಳ, ಹೋಬಳಿಗಳ ಸಂಖ್ಯೆ ಎಷ್ಟು ಹಾಗೂ ಈ ಕಂದಾಯ ಗ್ರಾಮಗಳಲ್ಲಿ ಎಷ್ಟು ಗ್ರಾಮಗಳಿಗೆ ಪೂರ್ಣ ಕಾಲಿಕ ಗ್ರಾಮ ಆಡಳಿತ ಅಧಿಕಾರಿಗಳು ಇದ್ದಾರೆ: (ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 8,373 ಗ್ರಾಮ ಆಡಳಿತ ಅಧಿಕಾರಿಗಳ ಕಂದಾಯ ವೃತ್ತಗಳು ಹಾಗೂ 770 ಹೋಬಳಿಗಳು ಇರುತ್ತವೆ.<br><br>ರಾಜ್ಯದಲ್ಲಿ ಭೂಮಿಕೇಂದ್ರಗಳು, ನಾಡಕಛೇರಿ ಮತ್ತು ಕಂದಾಯ ವೃತ್ತಗಳಿಗೆ ಒಟ್ಟು 9,842 ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 8,605 ಗ್ರಾಮ ಆಡಳಿತ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. |
| ಆ) | ರಾಜ್ಯದಲ್ಲಿ ಇರುವ ಒಟ್ಟು ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿ ಎಷ್ಟು ಅವು ಯಾವ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಯಲ್ಲಿ ಸಾರ್ವಜನಿಕರಿಗೆ ನೇರವಾಗಿ ಲಭ್ಯವಾಗುವ ಸೇವೆಗಳು ಯಾವುವು; ಗ್ರಾಮ ಆಡಳಿತ ಕಛೇರಿಗಳು ಸುಸಜ್ಜಿತವಾಗಿ ಇಲ್ಲದ ಕಾರಣ ಅವರು ಸ್ವಲ್ಪ ಹೊತ್ತು ಮಾತ್ರ ಕಂದಾಯ ಗ್ರಾಮೀಣ ಜನರಿಗೆ ಲಭ್ಯವಿದ್ದು, ಉಳಿದ ಸಮಯದಲ್ಲಿ ಕಂದಾಯ ನಿರೀಕ್ಷಕರ ಕಛೇರಿ ಅಥವಾ ಉಪ ತಹಶೀಲ್ದಾರ್ ಕಛೇರಿ, ತಹಶೀಲ್ದಾರ್ ಕಛೇರಿ ಸಹಾಯಕ ಆಯುಕ್ತರು, ಜಿಲ್ಲಾಧಿಕಾರಿ ಕಛೇರಿ ಎಂದು ಯಾವುದೇ ಮಾಹಿತಿ ಇಲ್ಲದೇ ಹೋಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ 816 ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಗ್ರಾಮ ಪಂಚಾಯಿತಿ ಕಛೇರಿಯ ಕಟ್ಟಡದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳಿಗೆ ಕಛೇರಿಯನ್ನು ಒದಗಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.<br><br>ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಯಲ್ಲಿ ಸಾರ್ವಜನಿಕರಿಗೆ ಭೂಕಂದಾಯ ವಸೂಲಿ, ಗ್ರಾಮಗಳಿಗೆ ಸಂಬಂಧಿಸಿದ ಎಲ್ಲಾ ರೀತಿಯ ದಾಖಲೆಗಳು, ಪಹಣಿ, ಮ್ಯುಟೇಷನ್, ಬಿಡಿ ಖಾತಾ ವಹಿ, ಗ್ರಾಮ ನಕ್ಷೆ, ಜನನ ಮರಣ ವಹಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ವಹಿ, ನೀರಾವರಿ ಇಲಾಖೆ ದೃಢೀಕರಣ ಪತ್ರ ಹಾಗೂ ಇನ್ನಿತರೆ ಸೇವೆಗಳು ಲಭ್ಯವಿರುತ್ತವೆ. |
| ಇ) | ಗ್ರಾಮ ಆಡಳಿತಾಧಿಕಾರಿಗಳು ಯಾವ ಯಾವ ಮೊಬೈಲ್ ಆಪ್ ಮೂಲಕ ಕೆಲಸಗಳನ್ನು ನಿರ್ವಹಿಸಬೇಕಾಗಿದೆ. ಸದ್ಯಕ್ಕಿರುವ ಮಾಹಿತಿಯಂತೆ ಸುಮಾರು ಏಳು ಮೊಬೈಲ್ ಆಧಾರಿತ ಅದನ್ನು ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ಸ್ವಂತ ಮೊಬೈಲ್ ಮೂಲಕ ನಿರ್ವಹಿಸುತ್ತಿದ್ದು ಅವರಿಗೆ | ಗ್ರಾಮ ಆಡಳಿತ ಅಧಿಕಾರಿಗಳು ಮೊಬೈಲ್ ಆಪ್ ಮೂಲಕ ಲ್ಯಾಂಡ್ ಬೀಟ್, ಆಧಾರ್ ಸೀಡಿಂಗ್, ಬಗರ್ ಹುಕ್ಕುಂ, ಬೆಳೆ ಕಟಾವು ಪ್ರಯೋಗ, ನಮೂನೆ-6,7,8 ನಿರ್ವಹಣಾ ಆಪ್, ಸಂಯೋಜನೆ ನಮೂನೆ-1 ರಿಂದ 5 ನಿರ್ವಾಹಣೆ ಆಪ್, ಕೃಷಿ ಗಣತಿ, ಬೆಳೆ ಸಮೀಕ್ಷೆ, |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | ಪ್ರತ್ಯೇಕ ಕಂದಾಯ ಇಲಾಖೆಯಿಂದ ಮೊಬೈಲ್‌ನ್ನು ನೀಡದಿರಲು ಕಾರಣವೇನು ಯಾವಾಗ ನೀಡಲಾಗುವುದು; | ಹಕ್ಕು ಪತ್ರ, ಗ್ರೌಂಡ್ ಟ್ರೂತಿಂಗ್ (ಬರಗಾಲ ಘೋಷಣೆಗಾಗಿ), ತಸ್ತಿಕ್ ಭತ್ಯೆ, ಇ-ಜನ್ಮ ತಂತ್ರಾಂಶ, VHP (Election App), ಹಾಗೂ ಸರ್ಕಾರವು ಕಾಲಕಾಲಕ್ಕೆ ಸೂಚಿಸುವ ಇತರೆ ಕೆಲಸಗಳನ್ನು ಮೊಬೈಲ್ ತಂತ್ರಾಂಶದ ಮೂಲಕ ನಿರ್ವಹಿಸುತ್ತಿದ್ದಾರೆ.<br><br>ಮುಂದುವರೆದು, 2024-25ನೇ ಸಾಲಿನ ಆಯವ್ಯಯದ ಕಂಡಿಕೆ ಸಂಖ್ಯೆ:399 ರಲ್ಲಿ ಘೋಷಿಸಿರುವಂತೆ ಡಿ.ಜಿ. ಕಂದಾಯ ಯೋಜನೆಯಡಿ ಗ್ರಾಮ ಆಡಳಿತ ಅಧಿಕಾರಿಗಳಿಗೆ Laptop ವಿತರಣೆ ಮಾಡುವ ಉದ್ದೇಶ ಹೊಂದಿದ್ದು, ಈಗಾಗಲೇ 4000 Laptopಗಳನ್ನು ಗ್ರಾಮ ಆಡಳಿತ ಅಧಿಕಾರಿಗಳಿಗೆ ವಿತರಣೆ ಮಾಡಲಾಗಿರುತ್ತದೆ. |
| ಈ) | ಕರ್ನಾಟಕ ರಾಜ್ಯದಲ್ಲಿ ಹಲವಾರು ಗ್ರಾಮಗಳು ಮಹಾನಗರ ಪಾಲಿಕೆ, ನಗರ ಪಾಲಿಕೆ, ನಗರಸಭೆ, ಪುರಸಭೆ ಪಟ್ಟಣ ಪಂಚಾಯಿತಿ, ಇತ್ಯಾದಿಗಳಿಗೆ ಸೇರ್ಪಡೆಗೊಂಡಿದ್ದು, ಈ ಗ್ರಾಮಗಳಿಗೆ ಪೂರ್ಣಕಾಲಿಕವಾಗಿ ಎಷ್ಟು ಗ್ರಾಮ ಆಡಳಿತ ಅಧಿಕಾರಿಗಳು ಇದ್ದಾರೆ; ಹೆಚ್ಚಿನ ಕಡೆ ಪ್ರಭಾರದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಇದ್ದು, ಸಾರ್ವಜನಿಕರ ಕೆಲಸಗಳು ಹಿಂದುಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 9,842 ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಯು ಮಂಜೂರಾಗಿದ್ದು, ಈ ಪೈಕಿ 8,605 ಹುದ್ದೆಗಳು ಭರ್ತಿಯಾಗಿದ್ದು, 1,237 ಹುದ್ದೆಗಳು ಖಾಲಿಯಿರುತ್ತವೆ.<br><br>ಖಾಲಿಯಿರುವ ಹುದ್ದೆಗಳಿಗೆ ಇತರೆ ಗ್ರಾಮ ಆಡಳಿತ ಅಧಿಕಾರಿಗಳನ್ನು ಪ್ರಭಾರದಲ್ಲಿರಿಸಿ, ಸಾರ್ವಜನಿಕ ಆಡಳಿತಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಕರ್ತವ್ಯ ನಿರ್ವಹಿಸಲಾಗುತ್ತಿದ್ದು, ಸಾರ್ವಜನಿಕರಿಗೆ ಹಾಗೂ ರೈತರಿಗೆ ಸೂಕ್ತ ಸಮಯದಲ್ಲಿ ಸರ್ಕಾರಿ ಸೇವೆಯನ್ನು ಒದಗಿಸಲಾಗುತ್ತಿದೆ. |

**ಸಂಖ್ಯೆ: ಕಂಇ 111 ಎಸ್‌ಎಸ್‌ಎಂ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು